'ದೇವರು ಎಂಬುದು ಇರುವುದು ಇಲ್ಲದಿರುವುದು ಎರಡೂ ಒಂದೇ. ದೇವರು ನಮಗೆ ಸಿಗುವುದು ಸಿಗದಿರುವುದು ಎರಡೂ ಒಂದೇ; ಆದರೆ ಹುಡುಕು; ದೇವರು ಸಿಗದಿದ್ದರೂ ಅಪ್ಪ ನಿನಗೆ ಸಿಗಬಹುದು. ನೀನು ಕೇವಲ ರೂಪದ ಆಧಾರದಲ್ಲಿ ಯಾರನ್ನೂ ಗುರುತಿಸಲಾರೆ ಅಭಿ. ಜನರ ಬಳಿ ಹೋಗಿ ಅವರ ಮಾತಿಗೆ ಕಿವಿ ಕೊಡು. ಕನ್ನಡ ಭಾಷೆ ಕಿವಿಗೆ ಬಿದ್ದರೆ ಎಲ್ಲ ಸಂಕೋಚ ಬಿಟ್ಟು ಅವರ ಜೊತೆ ಮಾತಾಡು. ಇಲ್ಲಿ ಬಹಳ ಮಂದಿ, 'ನಾನು ಇಲ್ಲೇ ದೇಹತ್ಯಾಗ ಮಾಡಲು ಬಂದಿದ್ದೇನೆ' ಎಂದು ಹೇಳುತ್ತಾರೆ. ಹಾಗೆ ಹೇಳುವ ಕನ್ನಡಿಗರು ತೀರಾ ಅಪರೂಪ. ಅದೇನೇ ಇರಲಿ. ಇಲ್ಲೇ ಸಾಯಲು ಬಂದವರಾಗಿರಲಿ, ಇಲ್ಲೇ ಇರಲು ಬಂದವರಾಗಲಿ, ಮಾತಾಡಿಸು. ಪ್ರತಿಯೊಬ್ಬರ ಬಳಿಯೂ 'ಗುರು ಶಾಂತಿ' ಎಂಬವನನ್ನು ಗೊತ್ತಾ? ನನ್ನ ಅಪ್ಪನನ್ನು ಹುಡುಕುತ್ತಾ ಇದ್ದೇನೆ. ನನ್ನ ಅಪ್ಪ ತುಂಬಾ ಸಮಯ ಗುರು ಶಾಂತಿಯ ಜೊತೆಯಲ್ಲಿ ಓಡಾಡುತ್ತಿದ್ದರಂತೆ ಎಂದು ಹೇಳು. ನಾನು ಹೇಳುತ್ತಿರುವುದು ಸತ್ಯ. ನಾನು ನೀನು ಹೇಳಿದ ಚಹರೆ ಮತ್ತು ವರ್ತನೆಯ ಮತ್ತು ಮೌನಿಯಾದ ವ್ಯಕ್ತಿಯ ಜೊತೆ ಓಡಾಡಿದ್ದೇನೆ. ಆದರೆ ಆತ ನಿನ್ನ ಅಪ್ಪ ಅಂತ ನನ್ನಿಂದ ಹೇಳಲಿಕ್ಕೆ ಸಾಧ್ಯವಿಲ್ಲ. ಆತ ತನ್ನ ಹೆಸರು, ಊರಿನ ಹೆಸರು ಹೇಳಲಿಲ್ಲ. ಆತನ ಬದುಕಿಗೆ ಸಂಬಂಧಿಸಿದ ಯಾವ ವಿಷಯವನ್ನೂ ಹೇಳಲಿಲ್ಲ. ಆತ ಬಹುತೇಕ ಯಾವಾಗಲೂ ಮೌನವಾಗಿಯೇ ಇರುತ್ತಿದ್ದ. ಮಾತಾಡ ತೊಡಗಿದರೆ ಬಹಳ ಹೊತ್ತು ಒಳ್ಳೆಯ ವಿಚಾರಗಳನ್ನು ಹೇಳುತ್ತಿದ್ದ. ತುಂಬಾ ಓದಿದವನು ಅಂತ ಅನಿಸುತ್ತಿತ್ತು' ಎಂದ ಗುರು ಶಾಂತಿ.

ಮರುದಿನ ಅಭಿ ಗಂಗಾನದಿಯ ದಡದಲ್ಲಿ ಜನಸಾಗರ ಮತ್ತು ಜಲಸಾಗರದ ದೃಶ್ಯವನ್ನು ನೋಡುತ್ತಾ ನಿಂತಿದ್ದಾಗ ಉದ್ದದ ಗಡ್ಡ ಮತ್ತು ಮೀಸೆಯ ಒಬ್ಬ ಮನುಷ್ಯ ನದಿಯಲ್ಲಿ ಮಿಂದು, ಒದ್ದೆ ಪಂಚೆಯ ನೀರು ಹಿಂಡಿ ತೆಗೆದು ಹೆಗಲ ಮೇಲೆ ಹಾಕಿಕೊಂಡು, ತನ್ನ ಚೀಲದಿಂದ ಒಣ ಪಂಚೆ ತೆಗೆದು ಉಟ್ಟುಕೊಂಡು ನದಿ ದಂಡೆ ಬಿಟ್ಟು ಈಚೆಗೆ ಬಂದಾಗ, ಆತನ ಹಾವ ಭಾವವನ್ನು ನೋಡಿ ಅಭಿಗೆ ಅಪ್ಪನ ನೆನಪಾಯಿತು. ಅಪ್ಪ ಆಗಿರಬಹುದೆ ಎಂಬ ಸಂದೇಹವುಂಟಾಯಿತು. ಅಭಿ ಆತನ ತೀರಾ ಸಮೀಪಕ್ಕೆ ಹೋದ. ಆತ ಅಪ್ಪನೇ ಎಂದು ಖಚಿತವಾಗಿ, ಉದ್ವೇಗದಿಂದಲೂ ಅತಿಶಯವಾದ ಸಂತೋಷದಿಂದಲೂ ಅಭಿ ಹೋಗಿ ಆತನ ಎದುರು ನಿಂತ. ಗಡ್ಡ ಮೀಸೆಯಲ್ಲಿ ಅಭಿಯ ಮುಖ ಕೂಡ ಮುಕ್ಕಾಲು ಭಾಗ ಮುಚ್ಚಿತ್ತು. ಅಪ್ಪನಿಗೆ ನನ್ನ ಗುರುತು ಸಿಗಲಾರದೆನಿಸಿ ಅವನ ಎದುರು ಅವನ ದಾರಿಗೆ ಅಡ್ಡವಾಗಿ ನಿಂತ. ಅವನ ಎದೆಯ ಮೇಲಿನ ಬರಹದಲ್ಲೇ ಕಣ್ಣು ನೆಟ್ಟು ತುಸು ಹೊತ್ತು ಯಾವ ಪ್ರತಿಕ್ರಿಯೆಯೂ ಇಲ್ಲದೆ ನಿಂತಿದ್ದ ನರಹರಿ 'ಅಭಿ' ಎಂದು ಉದ್ಗರಿಸಿ ಅಭಿಯನ್ನು ಬಳಸಿ ಅಪ್ಪಿಕೊಂಡ.

ಇಬ್ಬರೂ ಮಾತು ಮರೆತವರಂತೆ ಮೌನವಾಗಿ ನಡೆದು ದಂಡೆಯ ಮೇಲಿದ್ದ ಹಾಸುಗಲ್ಲಿನ ಮೇಲೆ ಕುಳಿತರು.

ತುಸು ಹೊತ್ತು ಅವರಿಗೆ ನಾಲಿಗೆಯಲ್ಲಿ ಮಾತು ಹೊರಡಲಿಲ್ಲ. ಇಬ್ಬರೂ ಅಸಂಭವನೀಯವಾದುದು ಸಂಭವಿಸಿದ ಅಚ್ಚರಿಯ ಗುಂಗಿನಲ್ಲೇ ಇದ್ದರು. ಮೊದಲ ಮಾತು ಯಾರು ಆಡಬೇಕು, ಏನು ಆಡಬೇಕು ಎಂದು ಇಬ್ಬರಿಗೂ ಹೊಳೆಯಲಿಲ್ಲ.

ಅಭಿಯೇ ಮಾತು ಆರಂಭಿಸಿದ. 'ಅಪ್ಪಾ, ನಾನು ಲೆಕ್ಕ ಹಾಕಿರುವಂತೆ ನೀನು ಮನೆ ಬಿಟ್ಟು ಹತ್ತೊಂಬತ್ತು ತಿಂಗಳು ಕಳೆಯಿತು. ಶರೀರದಲ್ಲಿ ಬಡವಾಗಿದ್ದಿ. ಆದರೆ ಆರೋಗ್ಯದಲ್ಲಿ ಚೆನ್ನಾಗಿರುವೆ ಎಂದನಿಸುತ್ತದೆ. ಆದ್ದರಿಂದ ನನಗೆ ತುಂಬಾ ಸಂತೋಷವಾಗಿದೆ. ನಾನು ಮನೆ ಬಿಟ್ಟು ಹತ್ತಿರ ಹತ್ತಿರ ಒಂದು ವರ್ಷವಾಯಿತು' ಎಂದು ಹೇಳಿ ಸ್ವಲ್ಪ ಹೊತ್ತು ಮೌನವಾಗಿದ್ದು ಮಾತು ಮುಂದರಿಸಿದ, 'ಅಪ್ಪಾ, ಈಗ ಪ್ರಶ್ನೆಗಳನ್ನು ಕೇಳಿ ನಾನು ನಿನಗೆ ತೊಂದರೆ ಕೊಡುವುದಿಲ್ಲ. ನಂಗೆ ಈ ಹೊತ್ತು ಮನಸ್ಸಿನಲ್ಲಿ ಬಂದ್ದನ್ನೆಲ್ಲ ಹೇಳಿ ಮುಗಿಸುತ್ತೇನೆ. ನೀನು ಗಮನವಿಟ್ಟು ನನ್ನ ಉಪದ್ವ್ಯಾಪವನ್ನು ಆಲಿಸುತ್ತಿ ಎಂಬ ನಂಬಿಕೆ ನನಗೆ ಇದೆ. ನಾನು ಮಾತು ನಿಲ್ಲಿಸಿದ ಮೇಲೆ ನೀನು ಮಾತಾಡಲೇಬೇಕು' ಎಂದು ತುಸು ತಡೆದು, 'ನಾವು ಇಬ್ಬರೂ ಈಗ ನಮ್ಮದಲ್ಲದ, ನಮ್ಮದಾಗಲಾರದ ಲೋಕದಲ್ಲಿ ಇದ್ದೇವೆ. ಇಲ್ಲಿ ಸಾವಿರಾರು ಜನ ಇದ್ದಾರೆ. ಇವರನ್ನು ಸಾವಿರಾರು 'ಒಂಟಿ'ಗಳು ಎನ್ನಬಹುದೇ ಹೊರತು 'ಇದ್ದಾರೆ' ಎಂದು ಪರಿಭಾವಿಸಬೇಕೆಂದರೆ ಅವರ ಅಂಕಿತ ಅವರ ವ್ಯಕ್ತಿತ್ವ ಸಹ ಅಲ್ಲ. ಇದು 'ಜನ' ಎಂದು ಕಾಣಿಸುವ ಬರೀ ಸಮೂಹ, ಸಮಾಜವಲ್ಲ. ನಾವು ಸಮಾಜದ ಮಧ್ಯದಿಂದ 'ಒಂಟಿ'ಗಳ ಮಹಾ ಸಮೂಹದ ಮಧ್ಯದಲ್ಲಿ ಇದ್ದೇವೆ. ನನ್ನ ದೃಷ್ಟಿಯಲ್ಲಿ, ನಾವು ಏನನ್ನು ಬದುಕು ಎಂದು ತಿಳಿಯುತ್ತೇವೋ ಆ ಬದುಕು ಇಲ್ಲಿ ಇಲ್ಲ. ನಾವಿಬ್ಬರೂ ಇಲ್ಲೇ ಉಳಿದು, ಇಲ್ಲೇ ಸಾವನ್ನು ನಿರೀಕ್ಷಿಸುತ್ತಾ ಇರಬಹುದು. ಮನುಷ್ಯನಾಗಿ ನಾನು ಮಾಡುವಂಥದು, ಮಾಡಬಹುದಾದಂಥದು ಏನೂ ಇಲ್ಲ. ನಮ್ಮನ್ನು ನಾವೇ ಒಂದು ಬಂಡೆಗೆ, ಒಂದು ಮರಕ್ಕೆ ಸಮ ಎಂದುಕೊಂಡು ಜೀವಿಸಲಾರೆವು ಎಂದು ನನಗನಿಸುತ್ತದೆ. ಗುಡಿಯಲ್ಲಿರುವ ಒಂದು ಕಲ್ಲಿನ ಮೂರ್ತಿಗೆ ಸಮ ಎಂದು ಕೂಡ ಭಾವಿಸಲಾರೆವು. ಗುಡಿಯಲ್ಲಿರುವ ಕಲ್ಲಿಗೆ ಕೂಡ ಒಂದು ಅಂಕಿತವಿದೆ. ನಾವು ಅಂಕಿತವಿಲ್ಲದೆ ಜೀವಿಸಲಾರೆವು. ಅಂಥ ಮನಸ್ಸು ನಮ್ಮದಲ್ಲ ಎಂಬುದು ನನ್ನ ಭಾವನೆ. ಒಂದು ಅಂಕಿತವನ್ನು ಪಡೆಯಲು ಸಾಧ್ಯವಿದೆ. ಹೇಗೆಂದರೆ, ಗುರು, ಗುರೂಜಿ, ಸ್ವಾಮೀಜಿ, ತೀರ್ಥ, ಆನಂದ ಇತ್ಯಾದಿಗಳಲ್ಲಿ ಯಾವುದಾರೂ ಒಂದನ್ನು ನಮಗೆ ಅಂಟಿಸಿಕೊಳ್ಳಬೇಕು. ಅದಕ್ಕೆ ಹೊಂದುವ ಅರಿವೆಯನ್ನು ತೊಟ್ಟುಕೊಳ್ಳಬೇಕು' ಎಂದು ತಡೆದು, 'ಈ ನೀಳವಾದ ಗಡ್ಡ ಮೀಸೆಯ ಅಂಕಿತ ಸಾಕೆ', ಉಹುಂ, ಸಾಲದು. ಈ ಅಂಕಿತಗಳನ್ನು ಅಂಟಿಸಿಕೊಂಡ ಮೇಲೆ ಅದಕ್ಕೆ ತಕ್ಕಂತೆ ಮಾತನ್ನು ಪಳಗಿಸಿ ನಮ್ಮದಾಗಿಸಿಕೊಳ್ಳಬೇಕು..' ಅಭಿ ಮಾತು ನಿಲ್ಲಿಸಿದ ಎಂದನಿಸಿತು ನರಹರಿಗೆ.

ನಿಧಾನವಾಗಿ ಬಹಳ ತಗ್ಗಿದ ದನಿಯಲ್ಲಿ ನರಹರಿ ಮಾತಾಡತೊಡಗಿದ, 'ಇಲ್ಲಿ ಯಾರ ಸ್ನೇಹ ಸಂಪರ್ಕವನ್ನೂ ನಾನು ಮಾಡಲಿಲ್ಲ. ಈ ಒಂದೂವರೆ ವರ್ಷ ಅಂಕಿತ ಅದು ಇದು ಯಾವುದೂ ಇಲ್ಲದಿರುವ ಬದುಕು ನನ್ನದಾಗಿತ್ತು, ಅದು ಆನಂದದಾಯಕವಾಗಿಯೂ ಇರಲಿಲ್ಲ, ದುಃಖದಾಯಕವಾಗಿಯೂ ಇರಲಿಲ್ಲ. ಇದೆ ಅಥವಾ ಇಲ್ಲ ಎನ್ನುವಂಥ ಸ್ವರೂಪ ಅದಕ್ಕೆ ಇರಲಿಲ್ಲ. ಇದೇ ರೂಪರಹಿತ ಸ್ವರೂಪದಲ್ಲಿರಲು ಸಾಧ್ಯ ಎಂದು ನನಗನಿಸಿದೆ. ಮಾತಿನಿಂದ ಮನುಷ್ಯನಿಗೆ ಸ್ವರೂಪ ಎನ್ನುವುದು ಉಂಟಾಗುತ್ತದೆ. ಮಾತು ಆಡದೆ, ಯಾರ ಸಂಪರ್ಕವೂ ಇಲ್ಲದೆ, ರೂಪರಹಿತನಂತೆ ಸುಮಾರು ಒಂದು ವರ್ಷ ಕಾಲ ಆನೆಮಹಲಿನಲ್ಲಿ ಏಕಾಂಗಿಯಾಗಿ ಜೀವಿಸಿದ ಅನುಭವ ನನಗಿದೆ ಅಭಿ. ಆ ಕಾಲದಲ್ಲಿಯೇ ಮೌನವಾಗಿರುವುದರಲ್ಲಿ ನನ್ನ ಅಂತರಾಳದಲ್ಲಿ ಒಂದು ಅನನ್ಯ ಆನಂದಮಯ ವಿಶ್ವವೇ ಉಂಟಾದಂತೆನಿಸಿತು. ಅದನ್ನು ಎಂದೂ ಕಳೆದುಕೊಳ್ಳಬಾರದು ಎಂಬ ಭಾವನೆ ಉಂಟಾಯಿತು. ಆ ಮೌನಕ್ಕೆ ಏನು ಕಾರಣ ಗೊತ್ತೇ ಅಭಿ? ನನ್ನ ಒಳಗೆ ಒಂದು ದುಃಖದ ಕೆಂಡವಿತ್ತು. ಅದು ಆರಿಸಲಾಗದ ಬೆಂಕಿಯಂತೆ ಇತ್ತು ಅದನ್ನು ಆರಿಸುವುದಕಾಗಿಯೇ ನಾನು ಮೌನಿಯಾದೆ. ಆ ದುಃಖಕ್ಕೆ ನಾನೇ ಕಾರಣವಾಗಿದ್ದೆ ಅಭಿ. ಅದು ಸ್ವಲ್ಪ ತಣ್ಣಗಾಗುತ್ತಿದೆ ಎನಿಸುತ್ತಿರುವಾಗ ಮತ್ತೆ ಹೊಸ ಕೆಂಡ ಉರುಳಿ ಬಂದು ನನ್ನ ಅಂತರಾಳದೊಳಗೆ ಬಿತ್ತು. ನಾನು ಆನೆಮಹಲಿನ ಮನೆ ಬಿಟ್ಟು ಬರಲು ಕಾರಣ ಹಳೆಯ ಬೆಂಕಿಯೊಡನೆ ಸೇರಿಕೊಂಡ ಹೊಸ ಬೆಂಕಿ ಅದಕ್ಕೂ ನನ್ನ ಅಪರಾಧವೇ ಕಾರಣ. ಇವತ್ತು ಯಾವ ಮುಚ್ಚುಮರೆಯೂ ಇಲ್ಲದೆ ಎಲ್ಲವನ್ನೂ ದೇವರಲ್ಲಿ ಹೇಳುವ ಹಾಗೆ ನಿನಗೆ ಹೇಳುತ್ತೇನೆ ಅಭಿ. ನೀನು ನನ್ನನ್ನು ದೇವರು ಎಂದು ಹೇಳಿದೆ. ನನಗೆ ದೇವರು ಎಂಬುದು ಚಿಕ್ಕದೂ ಅಲ್ಲ, ದೊಡ್ಡದೂ ಅಲ್ಲ. ನಿನ್ನಲ್ಲಿ ಕೂಡ ನಾನು ದೇವರನ್ನು ಕಾಣುತ್ತೇನೆ. ಆದರೆ ನಾನು ಇಲ್ಲಿಗೆ ಬಂದದ್ದು ಇಲ್ಲೇ ಕೊನೆಯುಸಿರೆಳೆಯಬೇಕು ಎಂಬ ಉದ್ದೇಶದಿಂದ. ನೀನು ಈ ರೀತಿ ನನ್ನನ್ನು ಹುಡುಕುತ್ತಿ ಎಂಬುದನ್ನು ಕಲ್ಪಿಸಿಕೊಳ್ಳಲು ಕೂಡ ನನ್ನಿಂದಾಗದು. ನೀನು ಚಿಕ್ಕವನಿರುವಾಗ ನಿನ್ನ ಮತ್ತು ನಿನ್ನ ಅಮ್ಮನ ಜೊತೆ ನಾನು ಎಷ್ಟು

## ಸವತಿ

ಮದ್ಯದ ಚಟಕ್ಕೆ
ಬಲಿಯಾದ ಪತಿ
ಬದಿಗೆ ತಳ್ಳಲ್ಪಟ್ಟಳು ಸತಿ
ಮದ್ಯ ಈಗವಳ ಸವತಿ!

★ ಕಾಸರಗೋಡು
ಅಶೋಕ್ ಕುಮಾರ್



ಈಶ್ವರ